

ಕೂಡ್ಯಾವ ಮೋಡ, ಸುತ್ತೆಲ್ಲ ನೋಡ! ಮುಗಿಲ ಪರದೆ ಸರಿದು ಚೆಲುವು ತೆರೆದುಕೊಳ್ಳುವ ಕ್ಷಣ

ಮಳೆಯ ವಿರಾಮದಲ್ಲಿ ನಮ್ಮ ಪಯಣ ಸಾಗಿದ್ದು ಕಂಪನಿ ಗಾರ್ಡನ್‌ಗೆ. ಮಳೆಬಿಲ್ಲಿನ ಎಲ್ಲಾ ಬಣ್ಣಗಳನ್ನು ಸುರಿದು ನಿರ್ಮಿಸಿದಂತೆ ಹೂಗಳಿಂದ ಆವೃತವಾಗಿದ್ದ ಆಕರ್ಷಕ ಕೈತೋಟವದು. ದಾರಿಯಲ್ಲಿ 'ಲಾಲ್ ಬಹದ್ದೂರ್ ಶಾಸ್ತ್ರಿ ನ್ಯಾಷನಲ್ ಅಕಾಡೆಮಿ ಆಫ್ ಅಡ್ಮಿನಿಸ್ಟ್ರೇಷನ್' ಕೇಂದ್ರದ ದರ್ಶನವಾಯಿತು. ಇದು ಇಡೀ ಭಾರತದಲ್ಲಿನ ನಾಗರಿಕ ಸೇವೆಗಳ ಪ್ರಧಾನ ತರಬೇತಿ ಸಂಸ್ಥೆ. ಸಾರ್ವನಿಕರಿಗೆ ಇಲ್ಲಿ ಪ್ರವೇಶ ಇಲ್ಲ.

ಲೈಬ್ರರಿ ಚೌಕ್‌ನಿಂದ 3 ಕಿ.ಮೀ. ದೂರದಲ್ಲಿದೆ ಶೆಡಪ್ ಜೋಪೆಲ್ಲಿಂಗ್ ದೇವಾಲಯ. ಇದು ಟಿಬೆಟಿಯನ್ನರ ಪ್ರಮುಖ ಕೇಂದ್ರಗಳಲ್ಲಿ ಒಂದು. ಮುಖ್ಯ ದೇವಾಲಯದಲ್ಲಿರುವ ಮೂರ್ತಿಗಳು, ಗೋಡೆಗಳ ಮೇಲಿನ ಚಿತ್ತಾರಗಳು ಬೆರಗಾಗಿಸುತ್ತವೆ. ಪೂರ್ವದಲ್ಲಿ ಪ್ರಶಾಂತವಾದ ವಿಶಾಲವಾದ ಗಿರಿಶಿಖರಗಳನ್ನೂ ಕಣ್ತುಂಬಿಕೊಳ್ಳಬಹುದು. ಸೂರ್ಯೋದಯ ನೋಡಲು ಇದು ಪ್ರಶಸ್ತ ಸ್ಥಳ. ಅಲ್ಲಿಂದ 400 ಮೀಟರ್ ಕಾಲ್ನಡಿಗೆಯಲ್ಲಿ ಇರುವುದೇ ದಲೈ ಹಿಲ್ ಅಥವಾ ಹ್ಯಾಪಿ ವ್ಯಾಲಿ. ಇದು ಪ್ರಕೃತಿ ನಿರ್ಮಿಸಿದ ಸ್ವರ್ಗದ ಮತ್ತೊಂದು ರೂಪ. ಈ ಗುಡ್ಡದ ಮೇಲೆ ಪೀತಾಂಬರ ಹೊದ್ದು, ಮುಗುಳ್ನಗುತ್ತಾ ಕುಳಿತಿರುವ ಬುದ್ಧ ಶಾಂತತೆಯ ಪ್ರತೀಕದಂತೆ ಕಾಣುತ್ತಾನೆ. ಸುತ್ತಲೂ ಕಣ್ಣು ಹಾಯಿಸಿದಷ್ಟು ಗಿರಿಧಾಮಗಳೇ. ಸ್ವರ್ಗಕ್ಕೆ ಮೆಟ್ಟಿಲುಗಳಂತಿರುವ ಈ ಹಾದಿ ಎಂತಹವರನ್ನೂ ಮೋಡಿ ಮಾಡುತ್ತದೆ. ಇಲ್ಲಿ ನೇತುಹಾಕಿರುವ ಲಕ್ಷಾಂತರ ಪ್ರಾರ್ಥನಾ ಬಾವುಟಗಳು ಗಿರಿಧಾಮಗಳಿಗೆ ಉಡಿಸಿದ ಬಣ್ಣಬಣ್ಣಗಳ ದುಪ್ಪಟಾಗಳಂತೆ ಕಾಣುತ್ತವೆ.

ಮೋಡಗಳ ಹಿಂದೆ ಅವಿತು ಕೂರುವ ಇಲ್ಲಿನ ಶಿಖರಗಳು ಕೆಲವು ಕ್ಷಣಗಳಷ್ಟೇ ದರ್ಶನ ನೀಡುತ್ತವೆ. ಈ ದರ್ಶನಕ್ಕಾಗಿ ಪ್ರವಾಸಿಗರು ಮಳೆಯಲ್ಲಿಯೇ ತಪಸ್ಸಿಗೆ ಕುಳಿತಂತೆ ಕಾಯುತ್ತಾರೆ. ಮುಂಗಾರಿನಲ್ಲಂತೂ ಈಕೆಯ ಕಣ್ಣಾಮುಚ್ಚಾಲೆ ಮತ್ತಷ್ಟು ಕಾಡಿಸುತ್ತದೆ. ಒಮ್ಮೆ ಜೋರು ಮಳೆ ಸುರಿದು ಮೋಡಗಳು ಕರಗಿದಾಗ ನಿಧಾನವಾಗಿ ಮಸೂರಿ ಗೋಚರಿಸುತ್ತದೆ. ಆಗ ಮಲ್ಲಿಗೆಯ ಮಳೆಯಲ್ಲಿ ಪಚ್ಚೆ ನೆರಿಗೆಯ ಲಂಗ ಉಟ್ಟವಳಂತೆಯೂ, ಅಲ್ಲಲ್ಲಿ ಕಾಣುವ ಪುಟ್ಟ ಪುಟ್ಟ ಊರುಗಳು ಆ ಲಂಗದ ಮೇಲೆ ಅರಳಿದ ಹೂಗುಚ್ಛಗಳಂತೆಯೂ ಕಾಣುತ್ತವೆ. ಅದನ್ನು ಕಣ್ತುಂಬಿಕೊಳ್ಳುವಷ್ಟರಲ್ಲಿ ಮರುಕ್ಷಣವೇ ಮಂಜಿನ ಹೊದಿಕೆಯಲ್ಲಿ ಮತ್ತೆ ಮರೆಯಾಗುತ್ತಾಳೆ.

ಮಸೂರಿಯಲ್ಲಿ ಇಂತಹ ಮೋಡಿ ಮಾಡುವ ಅನೇಕ ತಾಣಗಳಿವೆ. ಏಕಾಂತದಲ್ಲಿ ಪ್ರಕೃತಿ ಸಾಂಗತ್ಯ ಬಯಸುವವರಿಗೆ ದಲೈ ಹಿಲ್ ಉತ್ತಮ ಆಯ್ಕೆ.

ಶಾಪಿಂಗ್‌ಪ್ರಿಯರು 'ಮಾಲ್ ರೋಡ್'ನಲ್ಲಿ ಸಂಜೆ ಕಳೆಯಬಹುದು. ಹೆಚ್ಚಿನ ಮಂದಿ ಈ ರಸ್ತೆಯಲ್ಲಿರುವ ಹೋಟೆಲ್, ಕೆಫೆ, ರಸ್ಟೋರೆಂಟ್‌ಗಳಿಗೆ ಭೇಟಿ ನೀಡುತ್ತಾರೆ. ತರಹೇವಾರಿ ತಿಂಡಿ ತಿನಿಸುಗಳನ್ನು ಸವಿಯುತ್ತಾರೆ. ಪ್ರವಾಸೋದ್ಯಮವನ್ನೇ ಮುಖ್ಯ ಆರ್ಥಿಕತೆಯನ್ನಾಗಿ ಅವಲಂಬಿಸಿರುವುದರಿಂದ ಇಲ್ಲಿನ ಆಹಾರ, ವಸ್ತುಗಳು ಸಹಜವಾಗಿಯೇ ದುಬಾರಿ.

ಇಲ್ಲಿನ ಪ್ರವಾಸಿತಾಣಗಳಿಗೆ ಡೆಹ್ರಾಡೂನ್ ಮತ್ತು ಲೈಬ್ರರಿ ಚೌಕ್‌ನಲ್ಲಿಯೂ ಬಾಡಿಗೆಗೆ ಟ್ಯಾಕ್ಸಿಗಳು, ಸ್ಕೂಟಿಗಳು ಸಿಗುತ್ತವೆ. ಸ್ಕೂಟಿ ಬಯಸುವವರು ವಾಹನ ಉತ್ತಮ ಸ್ಥಿತಿಯಲ್ಲಿದೆಯೇ ಎಂಬುದನ್ನು ಪರೀಕ್ಷಿಸುವುದು ಮರೆಯಬಾರದು. ಮಾನ್ಸೂನ್‌ನಲ್ಲಿ ಟ್ರಾಫಿಕ್ ಸಮಸ್ಯೆ ಕಡಿಮೆ ಇದ್ದರೂ ಎಚ್ಚರಿಕೆ ವಹಿಸಬೇಕು.

ಮಸೂರಿ ನೋಡಲು ಬೇಸಿಗೆ ಉತ್ತಮ ಸಮಯವಾದರೂ, ಮಳೆಗಾಲವೂ ಅತ್ಯುತ್ತಮ ಅನುಭವಗಳನ್ನು ನಿಮ್ಮ ತೆಕ್ಕೆಗೆ ನೀಡುತ್ತದೆ. ಒಂದು ದಿನದ ಪುಟ್ಟ ಪ್ರವಾಸದಲ್ಲಿ ಐದಕ್ಕೂ ಹೆಚ್ಚು ಸ್ಥಳಗಳಿಗೆ ಭೇಟಿ ನೀಡಬಹುದು. ಮಸೂರಿ ಲೇಕ್, ಕ್ರೈಸ್ಟ್ ಚರ್ಚ್ ದನೌಲ್ಟಿ, ಕ್ಯಾಮಲ್ ಬ್ಯಾಕ್ ಹಿಲ್, ಗನ್ ಹಿಲ್, ಲಾಲ್ ಟಿಬ್ಬಾ, ಕೆಂಪ್ಟಿ ಫಾಲ್ ಎಲ್ಲವೂ ಆಕರ್ಷಕ ಸ್ಥಳಗಳೇ.



ಸುಂದರ ಪ್ರಕೃತಿ ನಡುವಿನ ಟಿಬೆಟಿಯನ್ ದೇವಾಲಯ

**ಪ್ರತಿಕ್ರಿಯಿಸಿ: feedback@sudha.co.in**